(೧೦) ರಾಜ್ಯದಲ್ಲಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಸಿಮೆಂಟ್ ಕಂಬ ಮತ್ತು ತಂತಿಯನ್ನು ಒದಗಿಸುವುದು

ಶ್ರೀ ಕೆ. ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಅಂದಾಜು ಮಂಜೂರಾಗಿದ್ದು, ಸಿಮೆಂಟ್ ಕಂಬಗಳು ಮತ್ತು ಬೇಕಾದ ತಂತಿ ಅಭಾವದಿಂದ ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದು ಕುಂಟಿತವಾಗಿದೆ, ಅಲ್ಲದೆ ವಿತ ನೀರಾವರಿ (ಕೊಡಲು) ಆಳವಡಿಸಲು ರೈತರು ಸಾಲಮಾಡಿ ಪಂಪುಸೆಟ್ಟುಗಳನ್ನು ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಂಡಿದ್ದರೂ ಅವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿಲ್ಲ. ಸಾಲ ಕಟ್ಟದ ರೈತರ ಆಸ್ತಿ ಹರಾಜಿಗೆ ಬರುವ ಸ್ಥಿತಿ ಉಂಟಾಗಿದೆ. ಆದ್ದರಿಂದ ವಿದ್ಯುಚ್ಛಕ್ತಿ ಒದಗಿಸಲು ಬೇಕಾಗುವ ಸಿಮೆಂಟ್ ಕಂಬ ಮತ್ತು ತಂತಿ ಇತರೇ ಸಾಮಾನು ಗಳನ್ನು ಒದಗಿಸಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಸಂಬಂಧಪಟ್ಟ ಮಂತ್ರಿಗಳಿಂದ ಇದಕ್ಕೆ ಉತ್ತರ ವನ್ನು ತರಿಸಿಕೊಡುತ್ತೇನೆ.

(೧೧) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಭೂಮಿಯನ್ನು ಆಕ್ರಮಣ ಮಾಡಿದ್ದನ್ನು ಸಕ್ರಮ ಮಾಡುವುದು

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಡ ಕೃಷಿಕರು ಹಲವಾರು ವರ್ಷಗಳಿಂದ ಸರಕಾರಿ ಭೂಮಿಯಲ್ಲಿ ಮನೆ, ಕೃಷಿ, ನೀರಿಗೆ ಬಾವಿ, ಪಂಪುಸೆಟ್ಟುಗಳನ್ನು ಮಾಡಿಕೊಂಡು ಈ ಭೂಮಿಯಲ್ಲಿ ವಾಸಿಸುತ್ತಿದ್ದಾರೆ. ಈ ಜಮೀನು ಸುಮಾರು ೧೦ ಸೆಂಟ್ಸ್‌ನಿಂದ ೫ ಎಕರೆಯವರೆಗೆ ಅವರು ಸ್ವಾಧೀನ ಮಾಡಿಕೊಂಡು ಬಂದಿರುತ್ತಾರೆ. ಈ ದೆಸೆಯಲ್ಲಿ ಸರಕಾರವು ಬಡ ಕೃಷಿಕರ ಬೇಡಿಕೆಯಲ್ಲಿ ಪರಿಶೀಲಿಸಿ ಹಲವಾರು ವರ್ಷಗಳಿಂದ ಅವರ ಸ್ವಾಧೀನತೆಯಲ್ಲಿದ್ದ ಕೃಷಿ ಭೂಮಿ ಯನ್ನು ಅಂದರೆ ಅಕ್ರಮಣ ಭೂಮಿಯನ್ನು ಸಕ್ರಮಗೊಳಿಸುವ ಕಾನೂನು ಜಾರಿಗೆ ತಂದು ಅವರಿಗೆ ಕೂಡಲೇ ಹಕ್ಕು ಪತ್ರವನ್ನು ನೀಡಬೇಕಾಗಿ ಈ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಏನು ವಿಚಾರವನ್ನು ಮಂಡಿಸಿರುತ್ತಾರೆ, ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಂದೆ ಇದೆ. ಸಮಿತಿಯಿಂದ ರಿಪೋರ್ಟ್ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

(೧೨) ಹಾನಗಲ್ ತಾಲ್ಲೂಕು ಬಾಳಂಬೀಡ ಗ್ರಾಮದ ಮತದಾರರಿಂದ ಚುನಾವಣೆಗೆ ಬಹಿಷ್ಕಾರ

ಶ್ರೀ ಸಿ. ಎಂ. ಉದಾಸಿ.—ಮಾನ್ಯ ಅಧ್ಯಕ್ಷರೇ ಹಾನಗಲ್ ತಾಲ್ಲೂಕು ಮೂಲನಾಡ ತಾಲ್ಲೂಕ್ ಇರುವುದರಿಂದ ಈಗಿರುವ ೧೪ ಮಂಡಲಿಗಳ ಬದಲು ೧೮ ಮಂಡಲಗಳನ್ನು ಮಾಡಬೇಕಾಗಿತ್ತು. ಹಾಗೆ ಆಗದೆ ಇರುವುದರಿಂದ ಹಾನಗಲ್ ತಾಲ್ಲೂಕಿನ ಬಾಳಂಬೀಡ ಗ್ರಾಮದ ಮತದಾರರು ತಮ್ಮ ಗ್ರಾಮ ಮಂಡಲ ಆಗದೇ ಇರುವುದರಿಂದ ಚುನಾವಣೆಯನ್ನು ಬಹಿಷ್ಕರಿಸಿದ್ದನ್ನು ಗಮನಿಸಿ ಹೆಚ್ಚು ಮಂಡಲಿ ಗಳನ್ನು ಮಾಡಲು ಮಾನ್ಯ ಸಚಿವರು ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಸಂಬಂಧಪಟ್ಟ ಮಂತ್ರಿಗಳಿಂದ ಅದಕ್ಕೆ ಉತ್ತರ ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಗ್ರಾಮಗಳಿಗೆ ಶಾಸಕರನ್ನು ಆಮಂತ್ರಣ ಮಾಡತಕ್ಕಂಥ ವಿಚಾರ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಮಾನ್ಯ ಸದಸ್ಯರು ಹೇಳಿರುವುದು ನಿಜ. ಅದರಲ್ಲಿ ಏನಾದರೂ ತಪ್ಪಿದ್ದರೆ ಅದನ್ನು ಸರಿಪಡಿಸುತ್ತೇನೆ.

(೧೩) ರಾಜ್ಯದಲ್ಲಿ ದರೋಡೆಕೋರರನ್ನು ಹಿಡಿಯಲು ಸೂಕ್ತ ವ್ಯವಸ್ಥೆ ಮಾಡುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ಬಿಡೇ ಮಾಪರಿಯ ಹಲವಾರು ಕಡೆ ದರೋಡೆಗಳು ನಡೆದಿದ್ದು ಪೋಲೀಸ್ ಇಲಾಖೆಯಿಂದ ದರೋಡೆಕೋರರನ್ನು ಹಿಡಿಯಲು ವಿಶೇಷ ವ್ಯವಸ್ಥೆ ನಡೆದಿಲ್ಲ. ರಾಜ್ಯದ ಹೊರಗಡೆಯಿಂದ ಈ ಗುಂಪೇಗಾರರು ಬಂದು ಸಾರ್ವಜನಿಕರ